ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅಪಾಯವುಂಟಾದಾಗ ರಿಪೇರಿ ಮಾಡುವುದು ಇಲಾಖೆಯ ಪದ್ಧತಿಯೇ?

ಶ್ರೀ ಆಲೂರು ಹನುಮಂತಪ್ಪ.—ಹಾಗಲ್ಲ. ಈ ಕೆರೆಯ ಏರಿಯಲ್ಲಿ ಬಹಳ ಪುರಾತನ ಕಾಲದ ಮರಗಳಿದ್ದೂ, ಅವುಗಳ ಬೇರುಗಳು ಒಣಗಿದಾಗ ಲೀಕ್ ಆಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ರಿಪೇರಿ ಕೆಲಸ ದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು? ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯ ಕೊಡಬೇಕೆಂದು ಹೇಳುವಾಗ ನಿಧಾನಮಾಡುವುದು ಉಚಿತವೆ?

ಶ್ರೀ ಆಲೂರು ಹನುಮಂತಪ್ಪ.—ಅದಷ್ಟು ಜಾಗ್ರತೆ ರಿಪೇರಿ ಮಾಡಲಾಗುತ್ತಿದೆ; ನಿಧಾನ ಮಾಡುತ್ತಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಎಷ್ಟು ವರ್ಷಗಳ ಹಿಂದೆ ಈ ಕೆರೆ ಕಟ್ಟಲಾಯ್ತು.

ಶ್ರೀ ಆಲೂರು ಹನುಮಂತಪ್ಪ.—ಬಹಳ ವರ್ಷಗಳ ಹಿಂದೆ. ತಕ್ಕ ರಿಪೇರಿಮಾಡಬೇಕಾಗಿದೆ. ಈ ಸಾರಿ 1,25,000 ರೂಪಾಯಿಗಳ ಅಂದಾಜಾಗಿದೆ. ಏರಿಗೆ ಮಣ್ಣು ಹಾಕುವುದು ಮುಂತಾದ್ದನ್ನು ಮಾಡಲು ಪ್ರಯತ್ನ ಮಾಡಲಾಗಿದೆ.

ಶ್ರೀ ಡಿ. ಪರಮೇಶ್ವರಪ್ಪ.—ಮೈನರ್ ಮತ್ತು ಮೇಜರ್ ಕೆರೆಗಳು ಯಾವ ಯಾವ ಸ್ಥಿತಿಯಲ್ಲಿವೆ ಎಂದು ವರ್ಷೇವರ್ಷೇ ವರದಿ ತರಿಸಬೇಕಾದ ರಿಪೇರಿ ಮಾಡುವ ವ್ಯವಸ್ಥೆಯಿದೆಯೆ?

ಶ್ರೀ ಆಲೂರು ಹನುಮಂತಪ್ಪ.—ಇಡೀ ಸಂಸ್ಥಾನದಲ್ಲಿರುವ ಕೆರೆಗಳ ಸ್ಥಿತಿಯನ್ನು ಸರಿಯಾಗಿ ತಿಳಿಯಲು ಟ್ಯಾಂಕ್ ಸರ್ವೆ ಮ್ಯಾನ್ಯುಯಲ್ ತಯಾರಿಸಲಾಗುತ್ತಿದೆ. ಅದಾದ ತಕ್ಷಣ ತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಪ್ರತಿವರ್ಷವೂ ಇಂಜನಿಯರು ಹೋಗಿ ಸರಿಯಾಗಿ ನೋಡದೆ ಹೋದುದರಿಂದ ತಾನೆ ತುಮಕೂರು ಕೆರೆಯಲ್ಲಿ ಆಗಾಗ್ಗೆ ತೊಂದರೆ ತಲೆದೋರುತ್ತಿರುವುದು?

ಶ್ರೀ ಆಲೂರು ಹನುಮಂತಪ್ಪ.—ಅದು ತಮ್ಮ ಅಭಿಪ್ರಾಯ. ಕೆರೆ ಏರಿಯಮೇಲೆ ಇರುವ ಕೆಲವು ಮರಗಳನ್ನು ಪೂಜಿಸುತ್ತಾರೆ. ಅವನ್ನು ಕಡಿಯಲು ಒಪ್ಪುವುದಿಲ್ಲ. ಇದರಿಂದ ತೊಂದರೆಯಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈಗಲಾದರೂ ಇರುವ ಮರಗಳನ್ನು ತೆಗೆದು ತೊಂದರೆಯಾಗದಂತೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಮಾಡಬೇಕಾದ್ದೂ ಆವಶ್ಯಕ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೆರೆ ಏರಿಯ ಮೇಲೆ ಜಂಗಲ್ ಕ್ಲಿಯರ್ ಮಾಡಬೇಕೆಂಬ ನಿಯಮವಿಲ್ಲವೆ. ಹಾಗೆ ಮಾಡಿದರೆ ಈ ರೀತಿ ತೊಂದರೆಯಾಗುವುದಿಲ್ಲ. ಅಲ್ಲವೆ?

ಶ್ರೀ ಆಲೂರು ಹನುಮಂತಪ್ಪ.—ಜಂಗಲ್ ಕ್ಲಿಯರಿಂಗ್ ಪ್ರಶ್ನೆ ಬೇರೆ. ಈ ಸಂದರ್ಭದಲ್ಲಿ ಕೆರೆ ಏರಿಮೇಲಿನ ಮರ ತೆಗೆದ ಮೇಲೆ ಬೇರು ಒಣಗಿ ಕೊಳೆತು ಲೀಕ್ ಡೆವಲಪ್ ಆಗಲು ಕಾರಣವಾಗಿದೆ.

Grant of Land in Chandragiri Village of Dodderi Hobli, Madhugiri Taluk.

*Q.—115. Sri T. S. SHIVANNA (Madhugiri.)—

Will the Government be pleased to state:—

(*a*) the number of acres of land in Sy. Nos. 452, 453, and 444 in Chandragiri village, Dodderi Hobli, Madhugiri Taluk, that were released for cultivation from the date grove;

(*b*) the number of applications that were received for the grant of land in the above Sy. Nos. and from that village and outside that village;

(*c*) who are the persons got the land;

(*d*) whether it has come to the notice of the Government that persons who are not cultivators and residing in that village are granted lands?

A.—Sri M. V. KRISHNAPPA (Minister for Revenue).—

(*a*) No land has been released.

(*b*) 31 applications from persons residing in the village and 8 from persons not residing in the village.

(*c*) & (*d*) Does not arise in view of reply to (*a*).

ಶ್ರೀ ಟಿ. ಎಸ್. ಶಿವಣ್ಣ.—ಜಮೀನನ್ನು ಸ್ಥಳದವರಿಗೆ ಕೊಡಬೇಕೆಂಬುದು ಸರ್ಕಾರದ ಉದ್ದೇಶವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಥಳದವರಿಗೆ ಕೊಡಬೇಕು. ಅನೇಕ ಸಂದರ್ಭಗಳಲ್ಲಿ ಪರಸ್ಥಳದವರಿಗೂ ಕೊಡಬೇಕಾಗುತ್ತದೆ. ಏಕೆಂದರೆ ಜಮೀನು ಮುಳುಗಡೆಯಾಗಿರುವ ರೈತರಿಗೆ ಅವರ ಊರಿನಲ್ಲಿ ಕೊಡಲು ಜಮೀನಿರದಿರುವ ಸಂದರ್ಭವಿರುತ್ತದೆ. ಆಗ ಬೇರೆ ಮಾರ್ಗವಿಲ್ಲ. ಎಕ್ಸ್-ಸರ್ವಿಸ್‌ಮೆನ್‌ಗೆ ಕೊಡಬೇಕು. ಹಾಗೆಯೇ ಪೊಲಿಟಿಕಲ್ ಸಫರರ್ಸ್‌ಗೆ ಬೇರೆ ಕೊಡಬೇಕು. ಇಂಥಹ ಸಂದರ್ಭಗಳಲ್ಲಿ ಹೊರಗಿನವರಿಗೂ ಕೊಡಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಚಂದ್ರಗಿರಿಯಲ್ಲಿ ಜಮೀನಿರುವವರ ಮತ್ತು ಇಲ್ಲದಿರುವವರ ಸಂಖ್ಯೆ ಎಷ್ಟಿದೆ ?

ಶ್ರೀ ಎಂ.ವಿ. ಕೃಷ್ಣಪ್ಪ.—ಆ ತಪಶೀಲು ನನ್ನಲ್ಲಿಲ್ಲ

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪೊಲಿಟಿಕಲ್ ಸಫರರ್ಸ್ ಎಂದು ಹೇಳಿದರು. ಅವರಲ್ಲಿ ಯಾರು ಯಾರು, ಯಾವ ದಿನ, ಎಷ್ಟೆಷ್ಟು ಆಸ್ತಿ ಪಾಸ್ತಿ ಕಳೆದುಕೊಂಡರು, ಅವರಿಗೇನು ತೊಂದರೆಯಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಈ ಸಂದರ್ಭದಲ್ಲಿ ಪೊಲಿಟಿಕಲ್ ಸಫರರ್ಸ್‌ಗೆ ಕೊಟ್ಟಿದೆಯೆಂದು ಹೇಳಲಿಲ್ಲ. ಮಾನ್ಯ ಸದಸ್ಯರು ಊಹಿಸಿ ಕೇಳುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾವು ಯಾರು ಯಾರಿಗೆ ಕೊಡಬಹುದೆಂದು ಈಗ ಹೇಳಿದಿರೋ ಅವರಲ್ಲದೆ ಬೇರೆ ಯಾರಿಗೆ ಜಮೀನು ಕೊಟ್ಟಿರುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಮೀನಿಲ್ಲದಿರುವವರು ಅಥವಾ ಜಮೀನಿದ್ದರೂ ಅವರ ಗ್ರಾಮದಲ್ಲಿ ನೀರಾವರಿ ಜಮೀನಿಲ್ಲದಿರುವಾಗ ಬೇರೆ ಗ್ರಾಮದಲ್ಲಿ ಕೆರೆಯಿದ್ದರೆ ಅಲ್ಲಿ ಕೊಡಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ಆ ಗ್ರಾಮದಲ್ಲಿ ಟಾವ್ ಟಾವ್ ಹೊಡೆಸಿ, ಅಲ್ಲಿ ಜಮೀನಿಲ್ಲದವರಿಗೆ ಮೊದಲು ಕೊಟ್ಟು, ಮಿಕ್ಕವರಿಗೆ ಆಮೇಲೆ ತಾನೆ ಕೊಡುವುದು ?

ಶ್ರೀ ಎಂ. ವಿ. ಕೃಷ್ಣಪ್ಪ.—Land Grant Rules ಓದಿ ಆಮೇಲೆ ಕೇಳಿ. ಸಂದರ್ಭಾನುಸಾರ ವ್ಯವಸ್ಥೆ ಮಾಡಬೇಕಾಗುತ್ತದೆ. ಈಗ ಶರಾವತಿಯ ರೈತರಿಗೆ ಭದ್ರಾವತಿಯಲ್ಲಿ ಜಮೀನು ಕೊಡುತ್ತಿದ್ದೇವೆ. ಚನ್ನಗಿರಿ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ಶರಾವತಿಯಲ್ಲಿ ಜಮೀನು ಮುಳುಗಡೆಯಾದವರಿಗೇ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಲ್ಲಿ ಮುಳುಗಡೆ ಪ್ರಶ್ನೆ ಬರುವುದಿಲ್ಲ. ಮಾಜಿ ಸೈನಿಕರು, ರಾಜಕೀಯ ದಲ್ಲಿ ನೊಂದವರು ಮುಂತಾದವರಿಗೆ ಎಂದು ಹೇಳಿದ್ದಿರಿ.....

ಶ್ರೀ ಎಂ.ವಿ. ಕೃಷ್ಣಪ್ಪ.—ಯಾರಿಗೂ ಕೊಟ್ಟಿದ್ದೇವೆಂದು ನಾನು ಉತ್ತರದಲ್ಲಿ ಹೇಳಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇನ್ನು ಮೇಲಾದರೂ ಜಮೀನನ್ನು ಮಂಜೂರು ಮಾಡುವಾಗ ಜಮೀನಿಲ್ಲದ ಸ್ಥಳವಂದಿಗರಿಗೇ ಕೊಡಬೇಕೆಂದು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—Land Grant Rules ನಲ್ಲಿ enpropriated raiyats ಎಲ್ಲಿಯಾದರೂ ಇರಬಹುದು. ಅವರಿಗೆ priority ಕೊಡಬೇಕೆಂದು ಹೇಳಿದೆ. ಎರಡನೆಯದು ಜಮೀನಿಲ್ಲದ ಹರಿಜನರಿಗೆ, ಮೂರನೆಯದಾಗಿ ರಾಜಕೀಯದಲ್ಲಿ ನೊಂದವರಿಗೆ, ನಾಲ್ಕನೆಯದಾಗಿ ಸೈನಿಕರಿಗೆ ಕೊಡಬೇಕೆಂದಿದೆ. ಈಗ ಆದನ್ನು ಸ್ವಲ್ಪ ತಿದ್ದುಪಡಿ ಮಾಡಿ ಸೈನಿಕರಿಗೆ ಮೊದಲ ಪ್ರಾಶಸ್ತ್ಯ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಯುದ್ಧ ಕಾಲದಲ್ಲಿ ಸೈನಿಕರಿಗೆ ಮೊದಲು ಕೊಟ್ಟು political sufferers ಗೆ ಕೊನೆಯಲ್ಲಿ, ಎಂಟನೆಯ ಅಥವಾ ಒಂಭತ್ತನೆಯ ಪ್ರಾಶಸ್ತ್ಯ ಕೊಡುವಂತೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಾಜಕೀಯ ಸಂತ್ರಸ್ತರೂ ಕೂಡಾ, ಯೋಧರು, ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟವರು.

ಶ್ರೀ ಕೆ.ಪಿ.ರೇವಣ್ಣಸಿದ್ದಪ್ಪ.—ಹಾಗಿದ್ದರೆ ಮುಂದಾದರೂ political sufferers ಗೆ ಮೊದಲೇ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಗಲೇ ಹೇಳಿದ್ದೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಶರಾವತಿಯವರಿಗೆ ಭದ್ರಾವತಿಯಲ್ಲಿ ಕೊಡುತ್ತಿದ್ದೇವೆಂದು ಹೇಳಿದಿರಿ. ಸ್ಥಳದಲ್ಲಿರುವವರಿಗೆ ಕೆಲವು ಭಾಗ ಬಿಡಬೇಕೆಂದು ಮಾಡಿದ್ದೇವೆಂದು ಹೇಳಿದಿರಿ, ಈಗ ಪುನಃ ಬದಲಾವಣೆ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಬಹಳ ಗಲಾಟೆ ಮಾಡಿದುದರಿಂದ, ರೂಲ್ಸ್‌ನ ಸ್ವಲ್ಪ ಬದಲಾವಣೆ ಮಾಡಿ ಶೇಕಡ 25 ರಷ್ಟನ್ನು ಸ್ಥಳದವರಿಗೆ ಕೊಡಬೇಕೆಂದು ಮಾಡಿದೆವು. ಜಮೀನು ಸಾಲದೆಯಿದ್ದರೆ ಇದನ್ನು ಬದಲಾವಣೆ ಮಾಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ರಾಜಕೀಯ ಸಂತ್ರಸ್ತರು, ಸೈನಿಕರು, ಹರಿಜನರು, ಇತ್ಯಾದಿಗಳು ಈ ಮೂವತ್ತು ಆರ್ಜಿದಾರರಲ್ಲಿ ಎಷ್ಟೆಷ್ಟಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಆ ವಿವರಗಳು ನನ್ನಲ್ಲಿಲ್ಲ. ಬೇಕಾದರೆ ಆಮೇಲೆ ತರಿಸಿ ಕೊಡುತ್ತೇನೆ.

Fuller Utilisation of Palar and Pennar Waters.

* Q.—144 Sri P. VENKATAGIRIYAPPA (Kolar).—

Will the Government be pleased to state :—

(*a*) whether there are any restrictions on the fuller utilisation of Palar and Pennar waters in view of the agreement with Madras State ;

(*b*) the details of such restrictions and agreement ;